8 ಶಾಸನಾತ್ಮಕ ನಿರ್ಣಯ

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಹಾಗೂ ಸಣ್ಣ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೆ, ನಾನು ಈ ಕೆಳಕಂಡ ನಿರ್ಣಯವನ್ನು ತಮ್ಮ ಅನುಮತಿ ಕೋರಿ ಸಭೆ ಮುಂದೆ ಮಂಡಿಸುತ್ತಿದ್ದೇನೆ.

"ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗವು ಪೊಲೀಸ್ ಸಿಬ್ಬಂದಿ ನೇಮಕಾತಿಗೆ ಸಂಬಂಧಿಸಿದಂತೆ 'ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗಗಳ ಅಭ್ಯರ್ಥಿಗಳಿಗೆ ನೀಡಿರುವ ಸೌಲಭ್ಯಗಳ ರೀತಿಯಲ್ಲಿ ಅಲ್ಪಸಂಖ್ಯಾತರಿಗೆ ರಾಜ್ಯ ಪೊಲೀಸ್ ಪಡೆಗಳ ನೇಮಕಾತಿಯಲ್ಲಿ ವಿದ್ಯಾರ್ಹತೆ ಮತ್ತು ಇತರೆ ಅರ್ಹತೆಗಳನ್ನು ಸಡಿಲಗೊಳಿಸುವ' ಬಗ್ಗೆ ರಾಷ್ಟ್ರೀಯ ಅಲ್ಪಸಂಖ್ಯಾತರ ಕಾಯ್ದೆಯ ಪರಿಚ್ಛೇದ 9(3) ಅಧಿನಿಯಮ, 1992ರಡಿಯಲ್ಲಿ ಮೆಮೊರ್ಯಾಂಡಮ್ ಅನ್ನು ಈ ಸದನವು ಅಂಗೀಕರಿಸುವುದು"

ಪ್ರಸ್ತಾವ ಮಂಡಿಸಲ್ಪಟ್ಟಿತು

ಅಧ್ಯಕ್ಷರು : ಈಗ ಪ್ರಸ್ತಾವನೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ,

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಅಧ್ಯಕ್ಷರು : ಮಾನ್ಯ ಖರ್ಗೆಯವರೆ, ಈಗ ನಾಲ್ಕೈದು ವಿಧೇಯಕಗಳಿವೆ, ಏನು ಮಾಡೋಣ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಈಗ ಸಾಹೇಬರು ಹತ್ತು ನಿಮಿಷದಲ್ಲಿ ಬರುವುದಾಗಿ ತಿಳಿಸಿದ್ದಾರೆ. ಆದಕಾರಣ, ಸದ್ಯಕ್ಕೆ ಉಳಿದಿರುವ ಮೂರು ವಿಧೇಯಕಗಳಲ್ಲಿ ಒಂದನ್ನಾದರೂ ತೆಗೆದುಕೊಂಡು ಪೂರ್ತಿಗೊಳಿಸಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅಧ್ಯಕ್ಷರೆ, ನಮ್ಮಿಂದಾಗುವುದಿಲ್ಲ ದಯವಿಟ್ಟು ಕ್ಷಮಿಸಬೇಕು.

ಅಧ್ಯಕ್ಷರು : ಸಹಕಾರ ಖಾತೆಗೆ ಸಂಬಂಧಿಸಿದಂತೆ ಒಂದು ವಿಧೇಯಕವಿದ್ದು, ಅದನ್ನು ಈಗ ತೆಗೆದುಕೊಳ್ಳೋಣ.

9 ಶಾಸನ ರಚನೆ

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ಕರ್ನಾಟಕ ಮಿತಿ ಮೀರಿದ ಬಡ್ಡಿ ವಿಧಿಸುವಿಕೆಯ ನಿಷೇಧ ವಿಧೇಯಕ, 2004.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು) : ಮಾನ್ಯ ಅಧ್ಯಕ್ಷರೆ, 2004ರ ಕರ್ನಾಟಕ ಮಿತಿ ಮೀರಿದ ಬಡ್ಡಿ ವಿಧಿಸುವಿಕೆಯ ನಿಷೇಧ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವ ಮಂಡಿಸಲಾಯಿತು

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು) : ಮಾನ್ಯ ಅಧ್ಯಕ್ಷರೆ, ಖಾಸಗಿ ಲೇವಾದೇವಿದಾರರು ಹೆಚ್ಚು ಬಡ್ಡಿ ವಿಧಿಸುವುದರಿಂದಾಗಿ ಬಹಳಷ್ಟು ಸಾರ್ವಜನಿಕರು ಅನಾಹುತಕ್ಕೊಳಗಾಗಿರುವುದು ನಮ್ಮ ಅನುಭವಕ್ಕೆ ಬಂದಿದೆ. ಅಲ್ಲದೆ, ಇದರಿಂದ ಬಹಳಷ್ಟು ಆತ್ಮಹತ್ಯೆಗಳೂ ಸಹ ನಡೆದಿದೆ. ತಿಂಗಳಿಗೆ ಸುಮಾರು 5 ರೂ, 10 ರೂ. ತರಹ ಬಡ್ಡಿ ವಿಧಿಸುವ ಮೂಲಕ ಸಾರ್ವಜನಿಕರನ್ನು ಬಹಳಷ್ಟು ಸಂಕಷ್ಟಕ್ಕೀಡುಮಾಡುತ್ತಿರುವುದನ್ನು ಸರ್ಕಾರ ಗಮನಿಸಿ, ಎರಡೂ ಅಧಿವೇಶನಗಳು ಇಲ್ಲದಿರುವ ಸಮಯದಲ್ಲಿ ಪರಿಸ್ಥಿತಿ ತುರ್ತಾಗಿದ್ದುದರಿಂದ ಸುಗ್ರಿವಾಜ್ಞೆ ಮೂಲಕ ಜಾರಿಗೆ ತಂದು ಸಾರ್ವಜನಿಕರ ಅನುಕೂಲಕ್ಕೋಸ್ಕರ ಒಂದು ಅವಕಾಶ ಮಾಡಿಕೊಡಲಾಯಿತು. ಈ ಹಿಂದೆ unsecured loanಗೆ ಶೇಕಡ 32ರ ಬಡ್ಡಿ ದರ ವಿಧಿಸುತ್ತಿದ್ದರೆ, secured loan ಗೆ ಶೇಕಡ 21ರಷ್ಟು ವಿಧಿಸಲಾಗುತ್ತಿತ್ತು.

ನಾವು ಈ ವಿಧೇಯಕ ತರುವ ಮೂಲಕ unsecured loanಗೆ ಬಡ್ಡಿ ದರವನ್ನು ಶೇಕಡ 16ಕ್ಕೆ ಇಳಿಸಿದ್ದರೆ, secured loanಗೆ ಶೇಕಡ 14ಕ್ಕೆ ಇಳಿಸಿದ್ದೇವೆ. ಯಾವುದೇ ಖಾಸಗಿ ಸಾಲಗಾರರು ಕೃಷಿ ಸಲುವಾಗಿ ಸಾಲ ಮಾಡಿದ್ದರೆ ಅಂತಹ ಸಾಲವನ್ನು ತೀರುವಳಿ ಮಾಡುವುದಕ್ಕೆ ಕನಿಷ್ಠ ಒಂದು ವರ್ಷ ಕಾಲ ಅವರಿಗೆ ಅವಕಾಶ ಕೊಡಬೇಕು. ಯಾರದೇ ಮನೆ ಬಾಗಿಲಿಗೆ ಹೋಗಿ ಹಠ ಮಾಡಿ ಅವರಿಗೆ ಕಷ್ಟ ಕೊಟ್ಟು ವಸೂಲಿಗೆ ತಗಾದೆ ಮಾಡಿದ ಪರಿಣಾಮ ಅವರೇನಾದರು ಆತ್ಮಹತ್ಯೆ ಮಾಡಿಕೊಂಡರೆ ಯಾರು ಸಾಲ ಕೊಟ್ಟಿರುತ್ತಾರೋ ಅವರ ಮೇಲೆ ಕ್ರಿಮಿನಲ್ ದಾವೆ ಹೂಡುವುದಕ್ಕೂ ಒಂದು ಅವಕಾಶವಿದೆ. ಒಂದು ವೇಳೆ ಕೇವಲ ಮಾತಿನ ಮೇಲೆ ಅಥವಾ ಕೆಲವರು ಜಮೀನು ಅಡವಿಟ್ಟು ಸಾಲ ಮಾಡಿರುವ ಪ್ರಕರಣಗಳೇನಾದರು ಇದ್ದರೆ ಅವರು ಸಿವಿಲ್ ನ್ಯಾಯಾಲಯಕ್ಕೆ ಹೋಗಿ ರಿಡ್ರೆಸಲ್ ಮಾಡುವುದಕ್ಕೂ ಒಂದು ಅವಕಾಶ ಮಾಡಿಕೊಟ್ಟಿದ್ದೇವೆ. ಇಷ್ಟೇ ಅಲ್ಲದೆ, ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಏಳು ಜನ ಅಧಿಕಾರಿಗಳ ಒಂದು ಸಮಿತಿ ರಚಿಸಿ, ಸಮಿತಿಯಲ್ಲಿ ಅವರು ಪರ್ಯಾಲೋಚನೆ ಮಾಡಿ ಸಮಸ್ಯೆ ಪರಿಹಾರಿಸುವುದಕ್ಕೆ ಅವಕಾಶ ಕಲ್ಪಿಸಿದ್ದೇವೆ. ಜನರ ಅನುಕೂಲತೆ ದೃಷ್ಟಿಯಿಂದ ಈ ವಿಧೇಯಕದ ಅಧ್ಯಾದೇಶವೇನಿದೆ, ಇದನ್ನು ಕಾನೂನಿನ ಮೂಲಕ ಜಾರಿಗೆ ತರಲು ಅನುಕೂಲವಾಗುವಂತೆ ತಾವೆಲ್ಲರೂ ಕರ್ನಾಟಕ ಮಿತಿ ಮೀರಿದ ಬಡ್ಡಿ ವಿಧಿಸುವಿಕೆಯ ನಿಷೇಧ ವಿಧೇಯಕಕ್ಕೆ ಒಪ್ಪಿಗೆ ನೀಡಬೇಕೆಂದು ನಾನು ವಿನಂತಿಸಿಕೊಳ್ಳುತ್ತಿದ್ದೇನೆ.

ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ತಂದಂಥ ಈ ಬಿಲ್ಲಿಗೆ ಸಂಪೂರ್ಣವಾಂಥ ಬೆಂಬಲವನ್ನು ಸೂಚಿಸುತ್ತೇನೆ. ಆದರೆ, ತಾವು ಇಲ್ಲಿ ಬಡ್ಡಿ ಎಷ್ಟು ಎಂಬುದನ್ನು ಹೇಳಿಲ್ಲ ಈ ಆಕ್ಟ್‌ನೊಳಗೆ ಸರ್ಕಾರ ನಿಗದಿ ಪಡಿಸಿದಂತೆ ಎಂದು ಮಾತ್ರ ಹೇಳಿಬಿಟ್ಟಿರಿ. ಅದು ಹೆಚ್ಚುಕಡಿಮೆಯಾಗಿ ಹೋಗುತ್ತದೆ. ಇದರಲ್ಲಿ ಅದನ್ನು ನಿಗದಿಪಡಿಸಿದ್ದೀರಾ?

ಶ್ರೀ ಹೆಚ್. ವಿಶ್ವನಾಥ್ : 16 ಎಂದು ನಿಗದಿ ಪಡಿಸಿದ್ದೇವೆ.

ಶ್ರೀ ಎಸ್.ಎಸ್. ಪಾಟೀಲ್ : ಆದರೆ ಇವತ್ತಿನ ಪರಿಸ್ಥಿತಿಯಲ್ಲಿ ಆ 16 ಸಹ ಜಾಸ್ತಿಯಾಗುತ್ತದೆ. ಬಡ್ಡಿ ರೇಟು ರೈತರಿಗೆ ಎಂಟೂವರೆಗೆ ಕೊಡಲು ಹೇಳಿದ್ದೀರಿ.

ಶ್ರೀ ಹೆಚ್. ವಿಶ್ವನಾಥ್ : ಇದು ವಿಶೇಷವಾಗಿ ಖಾಸಗಿ ವಲಯದಲ್ಲಿ ಆಗತಕ್ಕದ್ದು. ನಾವು ಯಾವುದು ಲೇವಾದೇವಿ ಮಾಡುತ್ತೇವೆ. ಅಡವನ್ನಿಟ್ಟುಕೊಂಡು, ಉಣ್ಣುವ ಮಾಡುವ ತಟ್ಟೆ ಉಡುವ ಬಟ್ಟೆ. ಉಳುವ ಎತ್ತು ಭೂಮಿ–ಕಾಣಿ ಇಟ್ಟುಕೊಂಡು ಅಡ ಇಡುತ್ತೇವಲ್ಲಾ ಅದರ ಮೇಲೆ ಹೇಳುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ಯಾರೂ ಇದನ್ನು ಅನ್‌ಸೆಕ್ಯೂರ್ಡ್ ಕೊಡುವುದಿಲ್ಲ. ಎಲ್ಲಾ ಓಚರ್ ಪತ್ರವನ್ನು ಬರೆಸಿಕೊಂಡು ಅದನ್ನು ಬಿಚ್ಚಿಟ್ಟುಕೊಂಡಿರುತ್ತಾರೆ. ಕೊಡ, ಹಂಡೆ, ಉಳುಮೆ ಮಾಡುವ ರಂಟೆಯನ್ನೂ ಸಹ ಇಟ್ಟು ಸಾಲ ತೆಗೆದುಕೊಳ್ಳುತ್ತಾರೆ. ಇವರು ಅನ್ ಸೆಕ್ಯೂರ್ ಯಾವುದನ್ನೂ ಕೊಡುವುದಿಲ್ಲ. ಎಲ್ಲಾ ಅನ್‌ಸೆಕ್ಯೂರ್ಡ್ ಎಂದು ಸುಳ್ಳು ಹೇಳುತ್ತಾರೆ. ಆ ಕಾರಣದಿಂದ ಇವತ್ತು ಬಹಳ ರೇಟು ಕಡಿಮೆಯಾಗಿರುವುದರಿಂದ ಅದೇನೋ 21 ರಿಂದ 16ಕ್ಕೆ ಇಳಿಸಿದ್ದೇವೆ ಎಂಬ ಅಂತರ ನಮಗೆ ಕಂಡರೂ ಇವತ್ತಿನ ಪರಿಸ್ಥಿತಿಯಲ್ಲಿ ಬಡ್ಡಿಯನ್ನು ಸಾಮಾನ್ಯವಾಗಿ ಎಂಟೂವರೆವರೆಗೆ ರೈತರಿಗೆ ಕೊಡುವ ಬಗ್ಗೆ ಹೇಳಿದ್ದೀರಿ, ಇವತ್ತು ಮನೆ ಕಟ್ಟುವುದಕ್ಕೆ ಕೊಡುವ ಸಾಲದ ಬಡ್ಡಿಯ ರೇಟು ಕಡಿಮೆಯಾಗಿದೆ. ಆ ಕಾರಣದಿಂದ ತಾವು ಇದರಲ್ಲಿ ಇನ್ನಷ್ಟು ಕಡಿಮೆ ಮಾಡಬೇಕೆಂದು ನನ್ನ ಸಲಹೆ ತಾವು ರೂಲ್ಸ್ ಮಾಡುವಾಗ ಮಾಡಿಕೊಡಿ. ಇದು ದಯವಿಟ್ಟು ಕಡಿಮೆಯಾಗಬೇಕು. ನಿಜವಾಗಿ ಇದು ಕಡಿಮೆಯಾದರೆ

ಬಹಳ ಒಳ್ಳೆಯದಾಗುತ್ತದೆ. ತಮಗೆ ಗೊತ್ತಿರುವಹಾಗೆ ಇವರು ಲೈಸೆನ್ಸ್ ತೆಗೆದುಕೊಳ್ಳಬೇಕಾದರೆ ಸರ್ಕಾರದಲ್ಲಿ ಡಿಫಾಜಿಟ್‌ನ್ನು ಇಡಬೇಕಾಗಿದೆ. ಇದು ಲೈಸೆನ್ಸ್‌ದಾರರ ಮೇಲೆ ಮಾತ್ರ ಇದೆಯೋ ಅಥವಾ ಲೈಸೆನ್ಸ್ ಇಲ್ಲದಿರುವವರ ಮೇಲೂ ಇದೆಯೋ? ಪಾನ್‌ಬ್ರೋಕರ್ಸ್ ಮೇಲಷ್ಟೇ ಇದು ಇದೆಯಲ್ಲವೇ? ಕೆಲವಾರೂ ಏನೂ ಇರುವುದಿಲ್ಲ, ಹಾಗೆಯೇ ಇಟ್ಟುಕೊಂಡು ಮಾಡುತ್ತಿರುತ್ತಾರೆ, ಅವರದ್ದು ಬಹಳ ಅತಿಯಾಗಿದೆ.

ಶ್ರೀ ಹೆಚ್. ವಿಶ್ವನಾಥ್ : ಅಂಥದ್ದು ಕೂಡ ಪಾನ್‌ಬ್ರೋಕಿಂಗ್, ಮನಿಲೆಂಡಿಂಗ್ ಆ್ಯಕ್ಟ್‌ನ ಒಳಗಡೆ ಸೇರುತ್ತದೆ.

ಶ್ರೀ ಎಸ್.ಎಸ್. ಪಾಟೀಲ್ : ಲೈಸೆನ್ಸ್ ಇರುವ ಮಂದಿ ಇದ್ದುದ್ದರಲ್ಲಿ ಕಂಟ್ರೋಲ್‌ಗೆ ಬರುತ್ತಾರೆ. ಹಳ್ಳಿಗಳಲ್ಲಿ ಲೈಸೆನ್ಸ್ ಇಲ್ಲದಿರುವವರು ಮಾಡುತ್ತಾರೆ ಅವರಿಗೆ ಏನಾಗುತ್ತದೆ?

ಶ್ರೀ ಹೆಚ್. ವಿಶ್ವನಾಥ್ : ಅವರಿಗೂ ಇದು ಕವರ್ ಆಗಿದೆ.

ಶ್ರೀ ಎಸ್.ಎಸ್. ವಿಶ್ವನಾಥ್ : ಅವರೂ ಇದರ ಅಡಿಯಲ್ಲಿ ಬರಬೇಕಾಗುತ್ತದೆ. ಹಿಂದೆ ಏನು ಮಾಡಿದ್ದರು ಎಂದರೆ, ನಮ್ಮ ಸರ್ಕಾರದಲ್ಲಿ ಅವರು ಡಿಫಾಜಿಟ್ ಇಡಬೇಕೆಂದು ಮಾಡಿದ್ದಾರೆ. ಅದರ ಮೇಲೆ ಬಡ್ಡಿಯನ್ನು ಕೊಡಿ ಎಂದು ಅವರು ಕೋರ್ಟ್‌ಗೆ ಹೋಗಿದ್ದರು. ಅನಂತರ 6 ಕೋಟಿರೂಯಷ್ಟು ಬಡ್ಡಿಯನ್ನು ತುಂಬಿ ಎಂದು ಸರ್ಕಾರಕ್ಕೆ ಬಂದಿತ್ತು. ಆಗ ಅದರ ಮೇಲೆ ಅಮೆಂಡ್‌ಮೆಂಟ್ ತಂದು ಡಿಫಾಜಿಟ್ ಎಂದು ಹಾಗೆಯೇ ಇಷ್ಟು ಇಡಬೇಕೆಂದು ನಮೂದು ಮಾಡಿದ್ದರು. ಹೈಕೋರ್ಟ್‌ನವರು ಬಡ್ಡಿಯನ್ನು ಕೊಡಿ ಎಂದು ಹೇಳಿದರು. ಅದನ್ನೂ ಕೂಡ ತೆಗೆದುಹಾಕಿದರು. ಇವರು ಬಹಳ ಬುದ್ದಿವಂತರಿದ್ದಾರೆ. ಅಲ್ಲಿ ಯಾವುದೂ ಅನ್‌ಸ್ಕೊರ್ಡ್ ಅಲ್ಲ. ಎಲ್ಲವೂ ಸೆಕ್ಯೂರ್ಡ್‌ನ್ನೇ ಅವರು ತೆಗೆದುಕೊಳ್ಳುತ್ತಾರೆ. ಆದರೆ ಹೆಸರು ಮಾತ್ರ ಅನ್ ಸೆಕ್ಯೂರ್ಡ್ ಎಂದು ಹೇಳುತ್ತಾರೆ. ಆ ಕಾರಣದಿಂದ ಇದರಲ್ಲಿ ಬಡ್ಡಿಯನ್ನು ಇನ್ನೂ ಕಡಿಮೆ ಮಾಡಬೇಕೆಂಬ ಸಲಹೆಯನ್ನು ಮಾಡುತ್ತೇನೆ. ಇದು ಒಳ್ಳೆಯ ಬಿಲ್ಲಾಗಿದೆ. ಇದನ್ನು ನಾನು ಸ್ವಾಗತಿಸುತ್ತಿದ್ದೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ (ಬ್ರಹ್ಮಾವರ) : ಮಾನ್ಯ ಅಧ್ಯಕ್ಷರೆ, ಸೆಕ್ಷನ್ 13 ರಲ್ಲಿ ಸಾಲ ಮರು ಸಾಂದಾಯದ ಮುಂದೂಡಿಕೆ. ಕರ್ನಾಟಕ ಲೇವಾದೇವಿಗಾರರ ಅಧಿನಿಯಮ 7ರಲ್ಲಿ ಒಳಗೊಂಡಿದ್ದರೂ ಸಾಲಗಾರ ರೈತ ಅಥವಾ ಕೃಷಿ ಕಾರ್ಮಿಕನಾಗಿದ್ದಲ್ಲಿ ಅವನ ವಿರುದ್ಧ ಈ ಅಧಿನಿಯಮದ ಪ್ರಕಾರ ದಿನಾಂಕದಿಂದ ಒಂದು ವರ್ಷದ ವರೆಗೆ ಸಾಲ ವಸೂಲಾತಿಗಾಗಿ ಯಾವುದೇ ಕ್ರಮವನ್ನು ಕೈಗೊಳ್ಳತಕ್ಕದಲ್ಲ. ಆದರೆ, ಲಿಮಿಟೇಷನ್ ಬಾರ್ ಆಗುವುದಾದರೆ ಆ ಅವಧಿಯನ್ನು ಪ್ರೊಟೆಕ್ಟ್ ಮಾಡಬೇಕಾಗುತ್ತದೆ. ಒಂದು ವರ್ಷದಲ್ಲಿ ಲಿಮಿಟೇಷನ್ ಆಗಿ ಕೋರ್ಟ್‌ಗೆ ಹೋಗಲು ಆಗದಿದ್ದರೆ? ಅದಕ್ಕೋಸ್ಕರ ಆ ಅವಧಿಯನ್ನು ಕವರ್ ಮಾಡಲು ಒಂದು enable ಮಾಡಬೇಕಾಗುತ್ತದೆ. ಅದನ್ನು ಸೇರಿಸಿಕೊಳ್ಳಬೇಕಾಗುತ್ತದೆ. ಮಾನ್ಯ ಎಸ್.ಎಸ್. ಪಾಟೀಲರು ಹೇಳಿದಂತೆ ಹೆಚ್ಚಿನವರು ಬ್ಲಾಂಕ್ ಪ್ರಾಮಿಸರಿ ನೋಟಿನ ಮೇಲೆ ಸಹಿಯನ್ನು ತೆಗೆದುಕೊಳ್ಳುತ್ತಾರೆ. ಬ್ಲಾಂಕ್ ಚೆಕನ್ನು ತೆಗೆದುಕೊಳ್ಳುತ್ತಾರೆ. ಅದು ಕಂಟ್ರೋಲ್‌ಗೆ ಬರುವುದಿಲ್ಲ. ಏಕೆಂದರೆ ಲಾಸ್ಟ್‌ನಲ್ಲಿ ಅದನ್ನು ಅವನು ಫಿಲ್ ಮಾಡಿಕೊಳ್ಳುತ್ತಾನೆ. ಅಂಥವರಿಗೆ ಏನು ಮಾಡುತ್ತೀರಿ? ಆನ್ ಡಿಮ್ಯಾಂಡ್ ಮೇಲೆ ಹಣವನ್ನು ಬರೆದು ಸಹಿಯನ್ನು ತೆಗೆದುಕೊಂಡು ಮಾಡಿದವರಿಗೆ, genuine ಸಾಲವನ್ನು ಕೊಟ್ಟವರಿಗೆ, ಪ್ರೈವೇಟ್ ಫೈನಾನ್‌ಶಿಯರ್ಸ್ ಇದ್ದಾರಲ್ಲಾ ಅವರು ಖಾಲಿ ಪೇಪರ್‌ಮೇಲೆ, ಅನ್ ಡಿಮ್ಯಾಂಡ್ ಮೇಲೆ ಸಹಿಯನ್ನು ತೆಗೆದುಕೊಳ್ಳುತ್ತಾರೆ. ಬ್ಲಾಂಕ್ ಚೆಕ್ ಮೇಲೆ ಸಹಿಯನ್ನು ತೆಗೆದುಕೊಂಡು ಇಟ್ಟುಕೊಳ್ಳುತ್ತಾರೆ. ಅವಧಿ ಮುಗಿದ ಮೇಲೆ

ಅವನು ಇದನ್ನೆಲ್ಲಾ ಸೇರಿಸಿ ಕೊಡುತ್ತಾರೆ. ಮತ್ತೊಂದು ಕಡೆ ಬಡ್ಡಿಯನ್ನು ಕಡಿತ ಮಾಡಿಕೊಂಡು ಸಾಲವನ್ನು ಕೊಟ್ಟಿರುತ್ತಾರೆ. ಅದು ಗೊತ್ತಾಗುವುದಿಲ್ಲ. ಅಂಥದ್ದಕ್ಕೆ ಏನು ವ್ಯವಸ್ಥೆ ಮಾಡುತ್ತೀರೆಂದು ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಎಚ್. ವಿಶ್ವನಾಥ್ : ಅದರ ಸಲವಾಗಿ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಜಿಲ್ಲೆಯ ಏಳು ಜನ ಹಿರಿಯ ಅಧಿಕಾರಿಗಳ ಒಂದು ಸಮಿತಿಯನ್ನು ಮಾಡಿದ್ದೇವೆ. ಯಾರಾದರೂ ಈ ರೀತಿ ಉಪಟಳಕ್ಕೆ ಒಳಗಾಗಿ ಜಿಲ್ಲಾಧಿಕಾರಿಯವರಿಗೆ ಅರ್ಜಿಯನ್ನು ಕೊಟ್ಟರೆ ಎರಡೂ ಪಾರ್ಟಿಯವರನ್ನು ಕರೆದು ಸಮಸ್ಯೆಯನ್ನು ಇತ್ಯರ್ಥಪಡಿಸಲೂ ಸಹ ಕಾನೂನಿನಲ್ಲಿ ಅವಕಾಶ ಮಾಡಿಕೊಡಲಾಗಿದೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಈಗ ಸ್ಥಳೀಯ ಪೊಲೀಸ್ ಅಧಿಕಾರಿಗಳನ್ನು ಹಿಡಿದುಕೊಂಡು ಸಾಲವನ್ನು ವಸೂಲಿ ಮಾಡಲು ಹೋಗುವುದು ಇದೆ. ಅದು ನಡೆಯುತ್ತಿದೆ. ಅದನ್ನು ನಿಲ್ಲಿಸಬೇಕಾಗುತ್ತದೆ.

ಶ್ರೀ ಕೆ.ಎನ್. ಸುಬ್ಬಾರಡ್ಡಿ (ಬಸವನಗುಡಿ) : ಪೊಲೀಸ್‌ನವರೇ ಅಲ್ಲ, ಇಲ್ಲಿ ಮಾಫಿಯಾಗ್ಯಾಂಗ್ ಇದೆ. ನಿಮಗೇನು ಕಾರು ಲೋನ್ ಕೊಡುತ್ತಾರೆ ಆ ಕಾರನ್ನು ಮಾಫಿಯಾಗ್ಯಾಂಗು ಒಂದು ನಿಮಿಷದಲ್ಲಿ ತೆಗೆದುಕೊಂಡು ಹೋಗಿಬಿಡುತ್ತಾರೆ. ವಿಧಾನ ಸೌಧದ ಹತ್ತಿರ ನಿಲ್ಲಿಸಿದರೆ ಒಂದು ನಿಮಿಷದಲ್ಲಿ ಹೋಗಿ ಬಿಡುತ್ತದೆ. ತಾವು ಆ್ಯಕ್ಟ್‌ನ್ನು ಮಾಡುತ್ತಿರುವುದು ಒಳ್ಳೆಯದು. ಇದನ್ನು ಮಾಡಬೇಕಾಗಿರುವುದು ಮುಖ್ಯ. ಆದರೆ, ಇದಕ್ಕೆ ನೀವು ಪೀನಲ್‌ಸೈಸ್ ಮಾಡಬೇಕಾಗುತ್ತದೆ, ಇದನ್ನು ಬಹಳ ಸೀರಿಯಸ್ ಆಗಿ ತೆಗೆದುಕೊಳ್ಳಬೇಕಾಗುತ್ತದೆ. ನೀವು ಮಾಡಿರುವುದರಲ್ಲಿ ಅದು ಏನೂ ಇಲ್ಲ, Enforcement is necessary. ಅನೇಕರು ಬಾಂಡ್‌ನ್ನೂ ಕೂಡ ಬರೆದುಕೊಳ್ಳುವುದಿಲ್ಲ.

ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಸದಸ್ಯರು ಕಾರನ್ನು ಅಟ್ಯಾಚ್ ಮಾಡುತ್ತಾರೆ ತೆಗೆದುಕೊಂಡು ಹೋಗುತ್ತಾರೆಂದು ಹೇಲಿದರು. ಬರಗಾಲದ ಹಿನ್ನೆಲೆಯಲ್ಲಿ ರೈತರ ಹಿತರಕ್ಷಣೆಗಾಗಿ ಬರಗಾಲದಿಂದ ಯಾರು ನೊಂದಿದ್ದಾರೆ, ಯಾರು ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಾರೆ ಅವರಿಗೆ ಸ್ವಲ್ಪ ಸಹಾಯ ಮಾಡತಕ್ಕದ್ದು. ಕಾರಿನವರಿಗೆ, ಸ್ಕೂಟರ್‌ನವರಿಗೆ ಅಲ್ಲ ಇದು. ಇಲ್ಲಿ ರೈತ ಎಂಬ ಶಬ್ದ ಇದೆ. ರೈತರ ಹಿತರಕ್ಷಣೆಯನ್ನು ಇದರಲ್ಲಿ ಮಾಡಿದ್ದಾರೆ. ನೀವು ರೈತಾಪಿ ವರ್ಗದವರಲ್ಲದವರಿಗೆ ಇದರ ಸಹಾಯ ಮಾಡಬೇಕೆಂದು ಹೇಳಿದರೆ ಅದು ಸೂಕ್ತವಲ್ಲ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಯಾರಿಗಾದರೂ ಒಂದೇ.

ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಸದಸ್ಯರು ಇದು ರೈತಾಪಿ ಜನಕ್ಕೆ ಬರಗಾಲದ ಹಿನ್ನೆಲ್ಲೆಯಲ್ಲಿ ತಂದಿರುವ ಒಂದು ವಿಧೇಯಕವೆಂದು ಹೇಳಿದರು. ನಾನು ಅಂದುಕೊಂಡಿರುವುದು ಆ ಹಿನ್ನೆಲೆಯಲ್ಲಿ ತಂದಿದ್ದರೂ ಕೂಡ ಈ ವಿಧೇಯಕ ಇಡೀ ಕರ್ನಾಟಕದಲ್ಲಿ ಎಲ್ಲರಿಗೂ ಕೂಡ ಅನ್ವಯವಾಗುತ್ತದೆ. ಎರಡನೆಯದಾಗಿ, ಮಾನ್ಯ ಜಯಪ್ರಕಾಶ್‌ಹೆಗಡೆಯವರು ಹೇಳಿದ್ದನ್ನು ನಾನು ಅನುಮೋದಿಸುತ್ತೇನೆ. ಲೇವಾದೇವಿಗಾರರು ಯಾರಿದ್ದಾರೆ, ಹಣಕಾಸು ಕೊಡುವವರು ಬಹಳ ಬಲಾಡ್ಯರು. ಸರ್ವೇಸಾಮಾನ್ಯವಾಗಿ ಅವರಿಗೆ ಪೊಲೀಸ್ ಸ್ಟೇಷನ್‌ನಲ್ಲಿ ಬಹಳ easy ಆಗಿ entry ಇರುತ್ತದೆ. ಆ ಸಾಲಗಾರ ಯಾರಿದ್ದಾನೆ ಅವನ ಪರಿಸ್ಥಿತಿಯನ್ನು ನೋಡಬೇಕು, ಅವನ ಮನೆಯನ್ನು ತನ್ನ ಹೆಸರಿಗೆ ಬರೆಸಿಕೊಂಡು ಬಿಟ್ಟಿರುತ್ತಾರೆ. ಒಂದೂವರೆ ವರ್ಷಗಳಾಗುವ ಹೊತ್ತಿಗೆ ಆ ಮನೆಯನ್ನು ಅವನು ತನ್ನದಾಗಿ ಮಾಡಿಕೊಳ್ಳುತ್ತಾನೆ. ಇವನು ಪೊಲೀಸ್ ಸ್ಟೇಷನ್‌ಗೆ ಹೋಗಿ ಪರಿಪರಿಯಾಗಿ ಬೇಡಿಕೊಂಡರೂ ಕೂಡ ಪೊಲೀಸ್‌ನವರು ನೀನು ಸಾಲ ಮಾಡಿದ್ದೀಯಾ, ನೀನು ಬರೆದುಕೊಟ್ಟಿದ್ದೀಯಾ ಕೊಡಯ್ಯಾ ಎಂದು ಹೇಳುತ್ತಾರೆ. ಆದರೆ ತಾವು ಏನು ಹೇಳಿದ್ದೀರಿ, ಮಿತಿಮೀರಿದ

ಬಡ್ಡಿ, ಆ ಮಿತಿ ಮೀರಿದ ಬಡ್ಡಿಗಿಂತ ಇನ್ಯಾವುದಾದರೂ ಬೇರೆ ಪದ ಇದ್ದರೆ ಹೇಳಬೇಕು. ಆ ರೀತಿಯ ಬಡ್ಡಿಯ ದರದಲ್ಲಿ ಮಾಡುತ್ತಿದ್ದಾರೆ. ಅವನು ಮಿತಿಮೀರಿದ ಬಡ್ಡಿಯಲ್ಲಿ ಹಾಕುತ್ತಿದ್ದಾರೆ. ಅದಕ್ಕೋಸ್ಕರ ನಾವು ಎಲ್ಲೆಲ್ಲಿಗೆ ಹೋಗಬೇಕೆಂದು ಮಾನ್ಯ ಗೃಹಸಚಿವರು ಹೇಳಿದರು, ನೀವು ಎಲ್ಲೆಲ್ಲೋ ಹೋಗುವುದೇ ಬೇಡ, ತಮ್ಮ ಇಲಾಖೆಗೆ, ತಮ್ಮ ಸ್ಟೇಷನ್‌ಗೇ ಜನರು ಬರುತ್ತಾರೆ ಆ ರೀತಿ ಜನರು ಬಂದಾಗ ಯಾವ ರೀತಿ ನಡೆದುಕೊಳ್ಳಬೇಕೆಂದು ಒಂದು ಸೂಚನೆ ಕೊಟ್ಟುಬಿಟ್ಟರೆ ಸಾಕು.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ : ಮಾನ್ಯ ಅಧ್ಯಕ್ಷರೆ, ಈ ವಿಧೇಯಕ....

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಒಬ್ಬರು ನಿವೃತ್ತ ಪೊಲೀಸ್ ಅಧಿಕಾರಿ ನನ್ನ ಹತ್ತಿರ ಬಂದಿದ್ದರು. particularly Special Additional SP ಅಂಥವರು. ಆ ರೀತಿ ಬಂದಾಗ ನನಗೆ ತಾವು ಮಾತನಾಡಲು ಅವಕಾಶ ಮಾಡಿಕೊಟ್ಟರು ನಾನು ಹೇಳುತ್ತೇನೆ ಎಂದರು ನಾನು ಏನು ಎಂದೆ, ಒಂದು ಕಾಲ ಇತ್ತು ಅಂದರೆ 1968–70ರ ಕಾಲ, ಆಗ ನಾವು ಎಲ್ಲಾದರೂ ಹೋದರೆ ಭಯ ಭೀತಿಯಿಂದ ಕೇಳುತ್ತೇವೆ ಎಂದ ತಕ್ಷಣವೇ ಹೇಳುತ್ತಿದ್ದರು, ಕೇಳಲಿಲ್ಲವೆಂದು ಸ್ವಲ್ಪ ಜಬರ್ದಸ್ತಾಗಿ ಕಂಡರೆ, ಹಿಂದೆ ಏನು ಅನೇಕ methods ಇದ್ದವು ಅದನ್ನು use ಮಾಡಿ ಅವನ ಬಾಯಿಯನ್ನು ಬಿಡಿಸುತ್ತಿದ್ದೆವು. ಆದರೆ ಈಗ ಕ್ರಿಮಿನಲ್‌ಗಳಿಗೂ, ಅಪರಾಧಿಗಳಿಗೂ ರಕ್ಷಣೆಗಳನ್ನು ಒಂದಲ್ಲ ಒಂದು ರೀತಿಯಿಂದ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಮತ್ತು ಎನ್‌ಜಿಓಸ್ ಕೊಡುತ್ತಿದ್ದಾರೆ. ಆದರಿಂದ, ನಮ್ಮ ಪರಿಸ್ಥಿತಿ ಏನಾಗಿದೆ ಎಂದರೆ ಒಬ್ಬ ಕಳ್ಳ ಕಳ್ಳತನ ಮಾಡಿಕೊಂಡು ಬಂದರೂ ಕೂಡ, ನಿಜವಾಗಿ ಅವನು ಬಾಯಿ ಬಿಡದೇ ಹೋದರೂ ಕೂಡ, disciplinary action ತೆಗೆದುಕೊಳ್ಳುತ್ತೀರಿ ಎನ್ನುವಂತಹ ನಿಮ್ಮ ಭಯ ಒಂದು ಕಡೆ, ಇನ್ನೊಂದು ಕಡೆ ನಾವೇನಾದರೂ ಅವನಿಗೆ ಮುಟ್ಟಿದರೆ, ಆ ಕಮೀಷನ್, ಈ ಕಮೀಷನ್ ಎಂದು ಹೋಗುತ್ತಾನೆ. ನಮಗೆ ಅದರೊಂದು ಭಯ ಇದೆ. ಕೊನೆಗೆ ನಮ್ಮ ಪರಿಸ್ಥಿತಿ ಎಲ್ಲಿಗೆ ಬಂದಿದೆ ಎಂದರೆ, ನಮ್ಮ ಕುರ್ಚಿಯ ಮೇಲೆ ಆ ಅಪರಾಧಿಯನ್ನು ಕೂರಿಸಿ, ಅವನ ಎದುರುಗಡೆ ಒಂದು ಚಬಕಾ ತೆಗೆದುಕೊಂಡು ಮೈ ತುಂಬಾ ಹೊಡೆದುಕೊಳ್ಳುವುದು, ಆಗ ಅವನು ಹೇಳುವುದು ಏನೆಂದರೆ ನೀವೇಕೆ ಹೊಡೆದುಕೊಳ್ಳುತ್ತೀರಿ ಹೊಡೆದುಕೊಳ್ಳಬೇಡಿ ಎಂದು ಅವನಿಗೇನಾದರೂ ಕರುಣೆ ಬಂದು, ಕೊನೆಗೆ ಅವನೇ ಹೇಳುವುದು, ಏನೆಂದರೆ, ನೀವು ಹೊಡೆದುಕೊಳ್ಳಬೇಡಿ, ನಾನು ಸತ್ಯ ಇದ್ದುದ್ದನ್ನು ಹೇಳುತ್ತೇನೆ, ದಯವಿಟ್ಟು ನೀವು ಕುಳಿತುಕೊಳ್ಳಿ ಎಂದೇಳಿ, ಆಗ ಅವನು ಕೂರಿಸಿದರೆ ನಾವು ಕೂರಬೇಕು, ನಮ್ಮದು ಇಂತಹ ಪರಿಸ್ಥಿತಿಗೆ ಬಂದಿದೆ ಎಂದು ಅವರು ಹೇಳಿದರು. ಅದನ್ನು ನಾನಿಲ್ಲಿ ಹೇಳಿದೆ. ಇಂತಹ ಸ್ಥಿತಿ ಕೂಡ ಇದೆ. ಒಂದು ಕಡೆ ಸೌಜನ್ಯದಿಂದ ನಡೆದುಕೊಳ್ಳಿ ಎಂದು ಹೇಳುತ್ತೇವೆ, ಇನ್ನೊಂದು ಕಡೆ ಸತ್ಯಾಂಶ ಹೇಳತಕ್ಕಂಥದ್ದನ್ನೂ ಕೂಡ ಸಮಾಜದಲ್ಲಿ ಇರುವವರು ಕಲಿಯಬೇಕಾಗಿರುವ ಅವಶ್ಯಕತೆ ಇದೆ. ಈಗೇನಾಗಿದೆ ಎಂದರೆ, ಯಾರು victim ಇರುತ್ತಾನೋ ಅವನಿಗೇ sympathy ಇಲ್ಲ. ಆದರೆ ಯಾರು ಅಪರಾಧ ಮಾಡುತ್ತಾನೋ ಅವನಿಗೆ ಹೆಚ್ಚಿಗೆ sympathy ತೋರಿಸಲಾಗುತ್ತಿದೆ. ಏನೋ ಪಾಪ ಹೊಡೆದಿದ್ದಾನೆ, ಏನೋ ತಪ್ಪು ಮಾಡಿದ್ದಾನೆ ಬಿಡಿ ಎನ್ನುವವರೇ ಹೆಚ್ಚಾಗಿದ್ದಾರೆ. ಆದರೆ ಹೊಡೆಸಿಕೊಂಡವನ ಗತಿ ಏನು? ಅವನ ಮಕ್ಕಳ ಗತಿ ಏನು? ಅದರ ಬಗ್ಗೆ ನಾವ್ಯಾರೂ ಯೋಚನೆ ಮಾಡುವುದಿಲ್ಲ. ಅದಕ್ಕೆ ಬಹುಶ: judiciously ನಾವು ಯೋಚನೆ ಮಾಡಿದರೆ, ನಮ್ಮ ಬಗ್ಗೆ ನಿಮಗೂ ಕೂಡ sympathy ಬರುತ್ತದೆ.

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೇ, ಇವರಿಗೆ ಯಾರೋ ಒಬ್ಬ ಒಳ್ಳೆಯ ಎಸ್ಪಿ ಬಂದು ಮಾತನಾಡಿದ್ದಾರೆ. ಆ ರೀತಿ ತಾವೇ ಮೈಗೆ ಹೊಡೆದುಕೊಳ್ಳುವವರು ಬಹಳ ಅಪರೂಪ. ಆದರೆ ಆಗುತ್ತಿರುವುದು ಸಂಪೂರ್ಣವಾಗಿ ಬೇರೆಯೇ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಯಾವುದಾದರೂ ಒಂದು ಹೊಸ ಇಲಾಖೆಯನ್ನು ಹುಟ್ಟಿಸಿ, ಅದನ್ನೇ ತೆಗೆದುಕೊಳ್ಳೋಣ. ಇದು ತೆಗೆದು, ಇನ್ನೊಂದು ಯಾವುದಾದರೂ ಹೊಸ ಇಲಾಖೆ ತಂದು ಕೊಡಿ, ಆ ವ್ಯವಸ್ಥೆಯನ್ನು ಮಾಡೋಣ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ (ಕೋಲಾರ) : ಮಾನ್ಯ ಅಧ್ಯಕ್ಷರೇ, ಈ ವಿಧೇಯಕ ನಿಜವಾಗಿಯೂ ಕೂಡ ಬಹಳ ಸ್ವಾಗತಾರ್ಹವಾದುದು. ನಾನು ಹಿಂದೆ ರೈತರ ಆತ್ಮಹತ್ಯೆಗಳು ವಿಷಯದ ಮೇಲೆ ಮಾತನಾಡುತ್ತಿರುವಾಗ ಈ ರೀತಿ ಮಿತಿ ಮೀರಿದ ಬಡ್ಡಿ ವಿಷಯದಲ್ಲಿ ಇಲ್ಲಿ ಬಹಳ ಬೆಳಕನ್ನು ಚೆಲ್ಲಿದ್ದೆ. ಹಾಗಾಗಿ ಇವತ್ತು ಈ ಬಿಲ್ ಅನ್ನು ನೀವು ಇಲ್ಲಿ ತಂದಿರುವುದು ನಿಜವಾಗಿಯೂ ಕೂಡ ಸ್ವಾಗತಾರ್ಹ. ಇದರಲ್ಲಿ ಒಂದು ನನಗನ್ನಿಸುತ್ತದೆ, ಈ ಬಗ್ಗೆ ಸುಗ್ರೀವಾಜ್ಞೆ ಮಾಡಿರುವ ಬಗ್ಗೆ ನಾನು ಪತ್ರಿಕೆಗಳಲ್ಲಿ ಓದಿದೆ, ಯಾರು ರೈತ ಆತ್ಮಹತ್ಯೆ ಮಾಡಿಕೊಳ್ಳುತ್ತಾನೋ, ಅವನೇನಾದರೂ ಇಂತಹ ಖಾಸಗಿಯವನ ಹತ್ತಿರ ಬಡ್ಡಿಗೆ ದುಡ್ಡು ತೆಗೆದುಕೊಂಡು ಹೋಗಿ ಸತ್ತು ಹೋಗಿದ್ದರೆ, ಐ.ಪಿ.ಸಿ. ಸೆಕ್ಷನ್ 302ರಲ್ಲಿ ಅವನ ಮೇಲೆ ಕೇಸನ್ನು ಬುಕ್ ಮಾಡಬೇಕು ಅನ್ನುವಂತಾದ್ದನ್ನು ನಾನು ಪತ್ರಿಕೆಗಳಲ್ಲಿ ನೋಡಿದ್ದೆ. ಆದರೆ ಅದನ್ನು ಇಲ್ಲಿ ತಂದಿರುವ ಬಿಲ್‌ನಲ್ಲಿಯ ಉದ್ದೇಶಗಳಲ್ಲಿ ನಾನು ನೋಡಲಿಲ್ಲ. ಅದನ್ನು ಬಿಲ್‌ನಲ್ಲಿ ಅಳವಡಿಸಿದ್ದೇ ಆದರೆ, ಯಾರೂ ಈ ರೀತಿಯಾಗಿ ಮಿತಿ ಮೀರಿದ, ನೂರಕ್ಕೆ 10–15 ರೂ. ಬಡ್ಡಿ ಹಾಕುವುದಿಲ್ಲ, ಅಂತಹವನು ಬಡ್ಡಿಗೆ ದುಡ್ಡು ಕೊಡುವಾಗಲೇ ಯೋಚನೆ ಮಾಡುತ್ತಾನೆ, ಚಿಂತನೆ ಮಾಡುತ್ತಾನೆ. ಇಲ್ಲದಿದ್ದರೆ, ಆಗಲೇ ಮಾನ್ಯ ಸುರೇಶ್‌ಕುಮಾರ್‌ರವರು ಹೇಳುವಂತೆ, ಇದು ಅದೇ ರೀತಿಗೆ ಹೋಗುತ್ತದೆ. ಚೆಕ್ ತೆಗೆದುಕೊಳ್ಳುತ್ತಾರೆ, ಮನೆ ರಿಜಿಸ್ಟರ್ ಮಾಡಿಕೊಳ್ಳುತ್ತಾರೆ, ಅವರೇನು ಅದಕ್ಕೆ ಬೇರೆ ತರಹ ಬರೆಸಿಕೊಳ್ಳುವುದಿಲ್ಲ, ಅದರ ಜೊತೆಗೆ ಈ ಪೊಲೀಸ್‌ನವರನ್ನೂ ಕೂಡ ಸರಿ ಮಾಡಿಕೊಳ್ಳುತ್ತಾರೆ. ಸಾಲಗಾರರು ಸುಮ್ಮನೆ ಇದ್ದರೂ ಕೂಡ ಸಾಕ್ಷಿದಾರರು ಸುಮ್ಮನೆ ಇರುವುದಿಲ್ಲ. ಸಾಲ ಕೊಟ್ಟವನು ಎಲ್ಲೋ ಇರುತ್ತಾನೆ, ಪೊಲೀಸಿನವರು ವಸೂಲಿ ಮಾಡುವುದನ್ನು ಶುರು ಮಾಡುತ್ತಾರೆ. ಇದೆಲ್ಲಕ್ಕೂ ಕೂಡ ನೀವು ತಡೆ ಹಾಕಬೇಕಾದರೆ, ಅವನ ಆತ್ಮಹತ್ಯೆಗಳಾದರೆ ಐ.ಪಿ.ಸಿ. 302ರ ಅಡಿಯಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆಂದು ನೀವು ಇದರಲ್ಲಿ ಸೇರಿಸಿ ಬಿಟ್ಟರೆ, ಆಗ ಅವರಿಗೆ ಹೆದರಿಕೆ ಬರುತ್ತದೆ. ಮಾನ್ಯ ಖರ್ಗೆಯವರೇ, ಆಗ ಪೊಲೀಸಿನವರೂ ಕೂಡ ಸ್ವಲ್ಪ ಹೆದರುತ್ತಾರೆ, ಇದೇನಾದರೂ ಆದರೆ ಎಲ್ಲಿ ನಮ್ಮ ಮೇಲೆ ಬರುತ್ತದೋ, ನಾವೂ ಕೂಡ ವಸೂಲಿಗೆ ಹೋಗದಂತೆ ನಿಲ್ಲಬೇಕು ಅನ್ನುವಂತಹ ಭಾವನೆ ಅವರಲ್ಲಿ ಬರುತ್ತದೆ. ಇದು ರೈತರ ಆತ್ಮಹತ್ಯೆಯನ್ನು ನಿಲ್ಲಿಸುವುದಕ್ಕೆ ಕೈಗೊಂಡಿರುವಂತಹ ಒಂದು ದಿಟ್ಟ ಕ್ರಮ. ಇದು ನಿಜವಾಗಿಯೂ ಕೂಡ ಸ್ವಾಗತಾರ್ಹವಾದುದು ಎಂದು ಮತ್ತೊಮ್ಮೆ ನಾನು ಮಾನ್ಯ ಸಹಕಾರ ಮಂತ್ರಿಗಳನ್ನು ಪ್ರಶಂಸಿಸುತ್ತಾ ಮಾನ್ಯ ಅಧ್ಯಕ್ಷರು ಇದನ್ನು ಪಾಸ್ ಮಾಡಿ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಹೆಚ್. ಪುಟ್ಟರಂಗಸಾಫ್ (ಬೇಲೂರು) : ಮಾನ್ಯ ಅಧ್ಯಕ್ಷರೇ, ಈ ಬಿಲ್ ನೋಡಿದಾಗ ನನಗೆ ತುಂಬಾ ಸಂತೋಷವಾಯಿತು. ಜೊತೆಗೆ ಈ ಪ್ರೈವೇಟ್ ಫೈನಾನ್ಸ್ ಇದವಲ್ಲಾ, ಇದನ್ನೂ ಕೂಡ ಇದರಡಿಯಲ್ಲಿ ಸೇರಿಸಬೇಕು. ಫೈನಾನ್ಸ್‌ನಲ್ಲಿ ದುಡ್ಡು ತೆಗೆದುಕೊಂಡಿರತಕ್ಕ ಸುಮಾರು ಜನರನ್ನು ಅವರು ಊರು ಬಿಟ್ಟು ಹೋಗುವಂತೆ ಮಾಡಿದ್ದಾರೆ. ಬೇಲೂರಿನಲ್ಲೇ ಸುಮಾರು 50 ಕುಟುಂಬಗಳು ಬೇರೆ ಕಡೆಗೆ ಹೋಗಿವೆ. ಊರಿನಲ್ಲಿಯೇ ಅವರು ಇಲ್ಲ, ಏಕೆಂದರೆ ಫೈನಾನ್ಸ್‌ನವರು ಕೊಡುವ ಹೊಡೆತವನ್ನು ತಾಳಲು ಅವರಿಂದಾಗಲಿಲ್ಲ. ಸುಮಾರು 10–20 ರೂ. ಬಡ್ಡಿಗೆ ಜನರನ್ನು ಕರೆ ಕರೆದು ಸಾಲ ಕೊಟ್ಟು, ಈಗ ಅವರುಗಳನ್ನು ಊರು ಬಿಟ್ಟು ಹೋಗುವಂತೆ ಮಾಡಿದ್ದಾರೆ. ಕೆಲವರು ಊರು

ಬಿಟ್ಟು ಹೋಗುವುದರ ಜೊತೆಗೆ ಸತ್ತೂ ಹೋಗಿದ್ದಾರೆ ಎಂದಿಟ್ಟುಕೊಳ್ಳಿ. ಅದು ಯಾರ ಗಮನಕ್ಕೂ ಬಂದಿಲ್ಲ. ಆದ್ದರಿಂದ, ಅವರು ಹೇಳಿದಂತೆ 302ರ ಅಡಿಯಲ್ಲಿ ಕೇಸ್ ರಿಜಿಸ್ಟರ್ ಮಾಡತಕ್ಕಂಥದ್ದನ್ನು ಮಾಡಬೇಕು. ಬಹಳ ಒಳ್ಳೆಯ ಸೂಚನೆಯೊಂದನ್ನು ಅವರು ಕೊಟ್ಟಿದ್ದಾರೆ. ದಯವಿಟ್ಟು ಅದನ್ನು ಮಡಬೇಕು. ಕೆಲವರು ಸರ್ಕಾರಿ ನೌಕರರು un-register ಆಗಿ ಫೈನಾನ್ಸ್ ಕಂಪನಿ ಮಾಡಿಕೊಂಡು, ಅವರುಗಳೂ ಕೂಡ ಸಾಲ ಕೊಟ್ಟಿದ್ದಾರೆ. ಆ ರೀತಿ ಸಾಲ ಕೊಟ್ಟವರು, ಸಾಲಗಾರನ ಮನೆಗೆ ಬೆಳಿಗ್ಗೆ 5 ಗಂಟೆಗೇ ಹೋಗಿ ಕಾಯುತ್ತಾರೆ. ಇಂತಹ ಪರಿಸ್ಥಿತಿ ಉಂಟಾಗಿ ಜನ ಊರು ಬಿಟ್ಟಿದ್ದಾರೆ. ದಯಮಾಡಿ ಈ ಸರ್ಕಾರಿ ನೌಕರರು ಇದರಲ್ಲಿ ಪಾಲ್ಗೊಂಡಿದ್ದಲ್ಲಿ ಅವರ ಮೇಲೂ ಸಹ ಕೇಸನ್ನು ರಿಜಿಸ್ಟರ್ ಮಾಡಬೇಕು, ಇಂತಹ un-registered financiers ಅನ್ನೂ ಕೂಡ ಈ ಬಿಲ್ ವ್ಯಾಪ್ತಿಯಲ್ಲಿ ತರಬೇಕು. ಪೊಲೀಸಿನವರಿಗೆ ರಿಪೋರ್ಟ್ ಕೊಟ್ಟಾಗ ಅಥವಾ ಕೇಸ್ ಅನ್ನು ರಿಜಿಸ್ಟರ್ ಮಾಡಿದಾಗ, ಅವರನ್ನು ಕರೆಸಿ ವಿಚಾರಣೆ ಮಾಡತಕ್ಕಂಥ ಒಂದು ವಿಧಾನವನ್ನು ಇದರಲ್ಲಿ ಅಳವಡಿಸಿಕೊಳ್ಳಬೇಕು. ರೂಲ್ಸ್ ಅಡಿಯಲ್ಲಿ ಅದನ್ನು ಅಳವಡಿಸಿದರೆ ಸಾಕಾಗುತ್ತದೆ. ಇಷ್ಟು ಮಾತ್ರ ಹೇಳಿ, ಈ ಬಿಲ್ ಅನ್ನು ನಾನು ಸ್ವಾಗತ ಮಾಡುತ್ತೇನೆ.

ಶ್ರೀ ಸಿ. ಚನ್ನಿಗಪ್ಪ (ಕೊರಟಗೆರೆ) : ಮಾನ್ಯ ಅಧ್ಯಕ್ಷರೇ, ಈ ಬಿಲ್ ತಂದಿರುವುದು ಸ್ವಾಗತಾರ್ಹ. ಲೇವಾದೇವಿಗಾರರು ಜನರಿಗೆ ದುಡ್ಡನ್ನು ಸಾಲ ಕೊಟ್ಟು ಬಡ್ಡಿ ಸಮೇತ ವಸೂಲಿ ಮಾಡಿಕೊಳ್ಳುವುದು ಒಂದು ವಾಡಿಕೆಯಾಗಿದೆ. ಆದರೆ ಯಮ ಕಿಂಕರರಂತೆ ಹೋಗಿ, ಅವರ ಜೀವ ತಿನ್ನುವಂತಹ ರೀತಿಯಲ್ಲಿ ಲೇವಾದೇವಿಗಾರರು ಏನು ವರ್ತಿಸುತ್ತಿದ್ದರೋ, ಅದಕ್ಕೆ ಕಡಿವಾಣ ಹಾಕಲು ಈ ರೀತಿಯ ಬಿಲ್ ಅನ್ನು ಮಾನ್ಯ ಮಂತ್ರಿಗಳು ಇಲ್ಲಿ ತಂದಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ತರಕಾರಿ ಮಂಡಿಗಳಲ್ಲಿ ತರಕಾರಿ ಮಾರಾಟ ಮಾಡತಕ್ಕಂಥ ಬಡ ಜನರಿಗೆ, ಡೈಲಿ ಬಡ್ಡಿಗೆ ದುಡ್ಡು ಕೊಟ್ಟು, ನೂರಕ್ಕೆ ಹತ್ತು ರೂ. ಬಡ್ಡಿಯನ್ನು ವಸೂಲು ಮಾಡತಕ್ಕಂಥ ವ್ಯಕ್ತಿಗಳು ಇವತ್ತು ನಗರ ಪ್ರದೇಶಗಳಲ್ಲಿ ಇರತಕ್ಕಂಥ ತರಕಾರಿ ಮಂಡಿಗಳು ಮತ್ತು ವರ್ತಕರ ಮಂಡಿಗಳಲ್ಲಿ ಇರುವುದನ್ನು ನಾನು ಕಂಡಿದ್ದೇನೆ. ಬಡ ಜನರಿಗೆ ಪ್ರತಿಕೂಲವಾಗತಕ್ಕಂಥ ಅನ್ಯಾಯವನ್ನು ಮಾಡತಕ್ಕಂಥ ಲೇವಾದೇವಿಗಾರರ ಬಗ್ಗೆ ತಾವು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಪೊಲೀಸ್ ಇಲಾಖೆಗೆ ಅಧಿಕಾರ ಕೊಡಬೇಕು. ಕಾನೂನು ಪ್ರಕಾರ ನ್ಯಾಯಾಲಯದಲ್ಲಿ ಅಂತಹವರಿಗೆ ಕಠಿಣ ಶಿಕ್ಷೆ ಕೊಡುವಂತಹ ಕ್ರಮವನ್ನು ಇದರಲ್ಲಿ ಅಳವಡಿಸಬೇಕು. ಮಾನ್ಯ ಸಚಿವರಿಗೆ ಈ ದಿಸೆಯಲ್ಲಿ ಕಳಕಳಿ ಇದೆ. ಕಾರಣ, ಅವರಿಗೆ ಹಳ್ಳಿಗಾಡಿನ, ಹಳ್ಳಿ ಜನರ, ರೈತರ, ಬಡವರ ಕಷ್ಟ ಸುಖ ಗೊತ್ತಿದೆ. ಆದ್ದರಿಂದಲೇ ಅವರು ಮಿತಿ ಮೀರಿದ ಬಡ್ಡಿ ವಿಧಿಸುವಿಕೆಯ ನಿಷೇಧ ವಿಧೇಯಕವನ್ನು ಇಲ್ಲಿ ತಂದಿದ್ದಾರೆ. ಆಗಲೇ ಮಾನ್ಯ ಸುರೇಶ್‌ಕುಮಾರ್‌ರವರು ಹೇಳಿದಂತೆ, ಆ ಕಿರುಕುಳದಿಂದ ಬಡ ಜನರನ್ನು ತಪ್ಪಿಸುವಂತಹ ಈ ವಿಧೇಯಕ ಸ್ವಾಗತಾರ್ಹವಾದುದಾಗಿದೆ. ಈ ರೀತಿಯಾಗಿ ಉತ್ತಮವಾಗಿರುವಂತಹ ಈ ವಿಧೇಯಕವನ್ನು ಪ್ರತಿಯೊಬ್ಬರೂ ಕೂಡ ಒಪ್ಪಿಕೊಳ್ಳುತ್ತಾರೆಂದು ನಾನು ಭಾವಿಸುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಮಾನು ಅಧ್ಯಕ್ಷರೇ, ಕರ್ನಾಟಕ ಮಿತಿ ಮೀರಿದ ಬಡ್ಡಿ ವಿಧಿಸುವಿಕೆಯ ನಿಷೇಧ ವಿಧೇಯಕ, 2004ನ್ನು ನಾನು ತುಂಬು ಹೃದಯದಿಂದ ಸ್ವಾಗತ ಮಾಡುತ್ತೇನೆ. ಇದನ್ನು ಸ್ವಾಗತಿಸುವ ಜೊತೆಯಲ್ಲಿ ನಾವು ಕೆಲವೊಂದು ಎಚ್ಚರಿಕೆಗಳನ್ನು

7.30 ಪಿ.ಎಂ

ವಹಿಸಬೇಕೆಂದು ಹೇಳುವಂತಹ ವಿನಂತಿಯನ್ನು ನಾನು ಮಾಡುತ್ತಿದ್ದೇನೆ. ಅನೇಕ ಸಲ ಸರ್ಕಾರ ಚಾಪೆ ಅಡಿಯಿಂದ ಹೋಗುವಂಥ ಪ್ರಯತ್ನಗಳನ್ನು ಮಾಡಿದಾಗ, ಅವರು ರಂಗೋಲಿ ಅಡಿಯಿಂದ

ಹೋಗುವಂತಹ ಪ್ರಯತ್ನಗಳು ಆಗುತ್ತವೆ. ಮಾನ್ಯ ಅಧ್ಯಕ್ಷರೇ, ನಾನು ನಮ್ಮ ಕ್ಷೇತ್ರದಲ್ಲಿ ಶಾಸಕನಾಗಿ ಕೆಲಸ ಮಾಡುತ್ತಿರುವಂತಹ ಸಂದರ್ಭದಲ್ಲಿ ಇಂತಹ ಅನೇಕ ಪ್ರಸಂಗಗಳು ನ್ನ ಎದುರಿಗೆ ಬಂದಿರುವುದನ್ನು ನಾನು ಕಂಡಿದ್ದೇನೆ. ಏನು ಮಾಡುತ್ತಾರೆ ಎಂದರೆ, ಕೇವಲ registered ಮತ್ತು ಇದಕ್ಕೆ ಸಂಬಂಧಪಟ್ಟ ಸಂಸ್ಥೆಗಳು ಮಾತ್ರವಲ್ಲ. un registered ಆಗಿರುವಂತಹ ವ್ಯಕ್ತಿಗಳೂ ಕೂಡ finance ಮಾಡುತ್ತಿದ್ದಾರೆ. finance company ಗಳೂ ಕೂಡ ಇದರ ವ್ಯಾಪ್ತಿಯಲ್ಲಿ ಬರುವಂತಹ ನಿಟ್ಟಿನಲ್ಲಿ ಏನು ಕ್ರಮಗಳನ್ನು ತೆಗೆದುಕೊಳ್ಳಬಹುದು ಎಂದು ಹೇಳುವಂತಹ ನಿಟ್ಟಿನಲ್ಲಿ ಕೂಡ ತಾವು ಎಚ್ಚರಿಕೆಯನ್ನು ವಹಿಸಬೇಕಾಗಿದೆ. ಎರಡನೆಯದಾಗಿ, ಇವರೇನು ಮಾಡುತ್ತಾರೆ ಎಂದರೆ, 50 ಸಾವಿರ ರೂ.ಗಳ ಸಾಲವನ್ನು ಕೊಡುವುದಿದ್ದರೆ, 50 ಸಾವಿರ ರೂ.ಗಳ ಸಾಲವನ್ನೂ ಕೊಟ್ಟರೂ ಕೂಡ. ಬರವಣಿಗೆಯಲ್ಲಿ 1 ಲಕ್ಷ ರೂ. ಸಾಲ ನೀಡಲಾಗಿದೆ ಎಂದು ತೋರಿಸುತ್ತಾರೆ, ಚೆಕ್‌ಗಳನ್ನು ಕೂಡ 1 ಲಕ್ಷ ರೂ.ಗಳಿಗೆ ಪಡೆದುಕೊಳ್ಳುತ್ತಾರೆ. ತಾವು 14% ಬಡ್ಡಿ ಎಂದು ಹೇಳಿದರೆ, ಆ 14% ಬಡ್ಡಿ ವ್ಯಾಪ್ತಿಯಲ್ಲಿಯೇ ಬರುವಂತಹ ರೀತಿಯಲ್ಲಿ, ಅಷ್ಟಕ್ಕೆ ಅನುಗುಣವಾಗಿ ಸಾಲದ ಮೊತ್ತವನ್ನು ಜಾಸ್ತಿ ಮಾಡಿ, ಆ ಮೊತ್ತಕ್ಕನುಗುಣವಾಗಿ ಅವರು ಚೆಕ್‌ಗಳನ್ನು ತೆಗೆದುಕೊಳ್ಳುತ್ತಾರೆ. ಎಲ್ಲಿಯಾದರೂ re-payment ಸ್ವಲ್ಪ delay ಆಯಿತು ಎಂದರೆ, ತಕ್ಷಣವೇ ಅವರು ಚೆಕ್ಕನ್ನು ಕಲೆಕ್ಷನ್‌ಗೆ ಹಾಕುತ್ತಾರೆ. ಆ ಚೆಕ್ ಕ್ಯಾಷ್ ಆಗುವುದಿಲ್ಲ, ಏಕೆಂದರೆ ಸಾಲ ಕೊಟ್ಟವರು ಹಣ ಕೊಡುವಂತಹ ಪರಿಸ್ಥಿತಿಯಲ್ಲಿ ಇರುವುದಿಲ್ಲ. ಅಂತಹ ಪರಿಸ್ಥಿತಿಯಲ್ಲಿ ಸಾಲ ತೆಗೆದುಕೊಂಡವರ ಮೇಲೆ ಸೆಕ್ಷನ್ 420 ಅಡಿಯಲ್ಲಿ ಅಪರಾಧಿಗಳನ್ನಾಗಿ ಮಾಡುವಂತಹ ಎಲ್ಲಾ ರೀತಿಯಾದಂತಹ ಪ್ರಯತ್ನಗಳನ್ನು ಮಾಡುತ್ತಾರೆ. ಸಾಲಗಾರರು ಕೊಟ್ಟಂತಹ ಕ್ಯಾಷ್ ಆಗದೇ return ಆಗಿದೆ, ಕಾನೂನಿನ ನಿಯಮಾವಳಿಗಳ ಪ್ರಕಾರ ಇಂತಹ ಸೆಕ್ಷನ್ ಪ್ರಕಾರ ಅವರ ಮೇಲೆ ಕೇಸ್ ಹಾಕಬೇಕಾಗಿದೆ ಎಂದು ಪೊಲೀಸ್ ಇಲಾಖೆ ಜೊತೆಗೆ ಅವರು ವ್ಯವಹರಿಸುತ್ತಾರೆ. ಒಂದು ಕಡೆಯಲ್ಲಿ ಸಾಲ ತೆಗೆದುಕೊಂಡವರಿಗೆ ಇದರಿಂದ ತಮ್ಮ ಮರ್ಯಾದೆ ಹೋಗುತ್ತದೆ ಎನ್ನುವ ಹೆದರಿಕೆ ಇದ್ದರೆ, ಇನ್ನೊಂದು ಕಡೆಯಲ್ಲಿ ಈ ರೀತಿಯ ಒತ್ತಡ ಹೇರುವಿಕೆಯಿಂದಾಗಿ ಅನೇಕ ತೊಂದರೆಗಳಾಗುತ್ತವೆ. ಆತ್ಮಹತ್ಯೆಗೆ ಶರಣಾಗುವಂತಹ ಅಥವಾ ಊರು ಬಿಟ್ಟು ಹೋಗುವಂತಹ ದುಸ್ಥಿತಿಗೆ ಅವರು ಬರುತ್ತಾರೆ. ಇದಲ್ಲದೆ ಸಾಲ ವಸೂಲಾತಿ ಮಾಡಲು ಸಂಬಂಧಪಟ್ಟವರು ಗ್ಯಾಂಗ್‌ಗಳನ್ನು ರಚಿಸಿರುತ್ತಾರೆ. ದಿನಬೆಳಗಾದರೆ ಹೆದರಿಕೆಯಿಂದ ಬದುಕುವಂತಹ ಪರಿಸ್ಥಿತಿ ಇರುತ್ತದೆ. ಬೆಳಿಗ್ಗೆಯೇ ಅವರು ಬಂದು, ಒಂದು ವಾರದೊಳಗೆ ನೀವು ಹಣ ಕೊಡದಿದ್ದರೆ, ನಿಮ್ಮ ಮೇಲೆ ಇಂತಹ ಕ್ರಮವನ್ನು ತೆಗೆದುಕೊಳ್ಳಲಾಗುವುದು ಅಥವಾ ಈ ರೀತಿಯಾಗಿ ನಾವು ಮಾಡಬೇಕಾಗಿ ಬರುತ್ತದೆ ಎನ್ನುವಂತಹ ಎಚ್ಚರಿಕೆಗಳನ್ನು ಅವರು ಕೊಡುತ್ತಾರೆ. ಕೈ ಕಾಲುಗಳನ್ನು ಮುರಿಯುತ್ತೇವೆ ಎಂದು threaten ಮಾಡಿರುವಂತಹ ಪ್ರಸಂಗಗಳೂ ಕೂಡ ಇವೆ. ಆಗ ಏನೂ ಉಪಾಯವಿಲ್ಲದೆ ನಮ್ಮ ಬಳಿಗೆ ಬರುತ್ತಾರೆ. ಆಗ ನಾವು ವಿನಂತಿ ಮಾಡಿ, ಇದರಲ್ಲಿ ಏನಾದರೂ ಕಡಿತ ಮಾಡಿ ಎಂದು ಕೇಳಿಕೊಳ್ಳುತ್ತೇವೆ. ನಾವು ಈ ರೀತಿಯಾಗಿ ವಿನಂತಿ ಮಾಡಿಕೊಳ್ಳುವುದನ್ನು ಬಿಟ್ಟರೆ, ಬೇರೆ ಏನನ್ನೂ ಮಾಡಲು ನಮ್ಮಿಂದ ಸಾಧ್ಯವಾಗುತ್ತಿರಲಿಲ್ಲ. ಕೆಲವೊಂದು ಸಲ ನಮ್ಮ obligation ಅಥವಾ ಹೆದರಿಕೆಯಿಂದ ವಸೂಲಿ ಮಾಡಬೇಕಾದ ಮೊತ್ತದಲ್ಲಿ ಒಂದಷ್ಟು ಕಡಿತ ಮಾಡಿದರೂ ಕೂಡ, ಇವರ ಮೇಲೆ ನಿಯಂತ್ರಣವನ್ನು ಇಟ್ಟುಕೊಳ್ಳುವುದು ನಮಗೆ ಸಾಧ್ಯವಾಗುತ್ತಿರಲಿಲ್ಲ. ಈ ಸಂದರ್ಭದಲ್ಲಿ ಮಾನ್ಯ ಸಚಿವರಿಗೆ ನಾನು ವಿನಂತಿಯನ್ನು ಮಾಡಿಕೊಳ್ಳಬಯಸುತ್ತೇನೆ. Registered Un-registered ಮತ್ತು ಇದಕ್ಕೆ ಸಂಬಂಧಪಟ್ಟಿರುವಂತಹ ಎಲ್ಲಾ Finance Companyಗಳೂ ಕೂಡ ಇದರ ವ್ಯಾಪ್ತಿಗೆ ಬರಬೇಕೆಂದು ಹೇಳುವಂತಹ ನಿಟ್ಟಿನಲ್ಲಿ ತಾವು ಕ್ರಮ ತೆಗೆದುಕೊಳ್ಳಬೇಕು. ವಿಶೇಷವಾಗಿ 13ನೇ ಪಾಯಿಂಟ್ ಅನ್ನು ಮಾನ್ಯ ಸಚಿವರು ಇಲ್ಲಿ ಗಮನಿಸಬೇಕು. ಸಾಲದ ಮರು ಸಂದಾಯದ ಮುಂದೂಡಿಕೆ ಬಗ್ಗೆ

ಈ ವಿಧೇಯಕದಲ್ಲಿ ಏನು ಹೇಳಿದ್ದಾರೆ. ಎಂದರೆ, ಪ್ರಾರಂಭದ ದಿನಾಂಕದಿಂದ ಒಂದು ವರ್ಷದ ಅವಧಿಯವರೆಗೆ ಸಾಲ ವಸೂಲಿಗಾಗಿ ಯಾವುದೇ ಕ್ರಮವನ್ನು ಕೈಗೊಳ್ಳತಕ್ಕದ್ದಲ್ಲ. ಮಾನ್ಯ ಅಧ್ಯಕ್ಷರೇ, ಸಾಲ ಕೊಡುವಂತಹ ಸಂದರ್ಭದಲ್ಲಿ ಇವರು ಏನು ಮಾಡುತ್ತಾರೆ ಎಂದರೆ , ಸಾಲ ಕೊಟ್ಟಿರುವಂತಹ ದಿನಾಂಕವನ್ನು ಹಿಂದೆ ಹಾಕಿ, ಈ ವಿಧೇಯಕದ ವ್ಯಾಪ್ತಿಯಿಂದ ಹೊರಗೆ ಉಳಿಯಬಹುದು. ನನ್ನಲ್ಲಿರುವಂತಹ ಆತಂಕ ಅಥವಾ ಹೆದರಿಕೆಯನ್ನು ನಾನು ಸರ್ಕಾರದ ಮುಂದಿಡುತ್ತಿದ್ದೇನೆ. ಸಾಲ ಕೊಡುವಾಗಲೇ ಒಂದು ವರ್ಷದ ಹಿಂದಿನ ದಿನಾಂಕವನ್ನು ನಮೂದಿಸಿ, ಸಾಲ ನೀಡಿ ಈಗಾಗಲೇ ಒಂದು ವರ್ಷವಾಗಿದೆ, ಆದ್ದರಿಂದ ಕಾನೂನು ಪ್ರಕಾರವೇ ವಸೂಲಿ ಪ್ರಕ್ರಿಯೆ ಮಾಡುತ್ತಿದ್ದೇವೆ ಎಂದು ಮಾಡಲಿಕ್ಕೂ ಕೂಡ ಸಾಧ್ಯ ಉಂಟು. ಈ ಹಿನ್ನೆಲೆಯಲ್ಲಿ ಯಾರೊಬ್ಬರು ಸಾಲ ಕೊಟ್ಟರೂ ಕೂಡ, ಅದನ್ನು ಯಾವುದಾದರೂ ಒಂದು registered body ಅದು ಜಿಲ್ಲಾಧಿಕಾರಿಗಳ ಕಛೇರಿ ಇರಬಹುದು ಅಥವಾ ಯಾವುದೇ ಇದಕ್ಕೆ ಸಂಬಂಧಪಟ್ಟಂತಹ ರಿಜಿಸ್ಟಾರ್ ಕಛೇರಿ ಇರಬಹುದು. ಅಲ್ಲಿ ಮಾಹಿತಿ ಕೊಟ್ಟು, ಅದು ಕಾನೂನಿನ ವ್ಯಾಪ್ತಿಗೆ ಬರುವ ಅವಧಿಯ ನಂತರವೇ ವಸೂಲಿಗೆ ಅವಕಾಶ, ಅಲ್ಲಿಯವರೆಗೆ ಅದನ್ನು ವಸೂಲಾತಿ ಮಾಡಲಿಕ್ಕೆ ಸಾಧ್ಯವಿಲ್ಲ ಎಂದು ಹೇಳುವಂತದ್ದನ್ನು ಯಾವುದೇ ನಿಯಮಾವಳಿಗಳಲ್ಲಿ ತರಲಿಕ್ಕೆ ಸಾಧ್ಯವಾಗುವುದಾದರೆ ಮಾತ್ರ ಏನಾದರೂ ಇವರಿಗೆ ರಕ್ಷಣೆಯನ್ನು ಕೊಡಲಿಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ, ಮಾನಸಿಕವಾಗಿ ಅವರು ನರಳುತ್ತಾರೆ. ಒಂದು ಕಡೆಯಲ್ಲಿ ಹೆದರಿಕೆ, ಇನ್ನೊಂದು ಕಡೆಯಲ್ಲಿ ಮರ್ಯಾದೆ ಹಾಗೂ ಇನ್ನಿತರ ಸ್ವಾಭಿಮಾನಕ್ಕೆ ಎಲ್ಲಿಯಾದರೂ ಧಕ್ಕೆ ಬರುತ್ತದೆ ಎಂದು ಹೇಳುವಂತಹ ಆತಂಕದಲ್ಲಿ ಜೀವನ ನಡೆಸುವಂತಹ ಅನೇಕ ಕುಟುಂಬಗಳು ಇವೆ. ಇವತ್ತು ಬ್ಯಾಂಕ್ ಸಾಲಗಳು ಅಥವಾ ಇನ್ನಿತರ ಸಾಲಗಳು ಸರಾಗವಾಗಿ ಸಿಕ್ಕಿದಲ್ಲಿ ಇಂತಹವರ ಕಡೆಗೆ ಜನರು ಸಾಲಕ್ಕಾಗಿ ಹೋಗುವಂತಹ ಸ್ಥಿತಿ ಬರುವುದಿಲ್ಲ. ಇಂತಹ ಸ್ಥಿತಿ ಕೂಡ ಬರುತ್ತಿರುವುದರಿಂದ, ನಮ್ಮ ಕ್ಷೇತ್ರದಲ್ಲಿ ಕೂಡ ನಾವು ಇಂತಹ ಸಾಕಷ್ಟು ನೋವುಗಳನ್ನು ಗಮನಿಸಿರುವುದರಿಂದ, ಮಾನ್ಯ ಸಚಿವರು ಇದಕ್ಕೆ ಸಂಬಂಧಪಟ್ಟಂತಹ ರೂಲ್ಸ್ ಅನ್ನು ಮಾಡುವಂತಹ ಸಂದರ್ಭದಲ್ಲಿ ಈ ವ್ಯಾಪ್ತಿ ಎಲ್ಲಾ ಕಡೆಗೂ ಪಸರಿಸುವಂತಹ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಬೇಕು ಎನ್ನುವಂತಹ ವಿನಂತಿಯನ್ನು ಮಾಡಿಕೊಳ್ಳಲಿಚ್ಛಿಸುತ್ತೇನೆ.

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳು ಕೊಟ್ಟಂತಹ ಸಲಹೆಗಳನ್ನು ನಾವು ರೂಲ್ಸ್ ಅನ್ನು ಮಾಡುವಂತಹ ಸಂದರ್ಭದಲ್ಲಿ ಗಮನದಲ್ಲಿಟ್ಟುಕೊಳ್ಳುತ್ತೇವೆ. ಕ್ರಿಮಿನಲ್ ಕೇಸ್‌ಗಳನ್ನು ಬುಕ್ ಮಾಡುವ ಬಗ್ಗೆ ಹೇಳುವುದಾದರೆ, ಸುಮಾರು 63 ಪ್ರಕರಣಗಳು ನಮಗೆ ಪತ್ತೆಯಾಗಿದೆ. ಇದರಲ್ಲಿ 11 ಪ್ರಕರಣಗಳಲ್ಲಿ ಕೇಸ್ ಅನ್ನು ಈಗಾಗಲೇ ರಿಜಿಸ್ಟರ್ ಮಾಡಿದ್ದೇವೆ. ಸನ್ಮಾನ್ಯ ಸದಸ್ಯರುಗಳೆಲ್ಲರೂ ಸ್ವಾಗತ ಮಾಡಿರುವಂತಹ ಈ ವಿಧೇಯಕವನ್ನು ಅಂಗೀಕರಿಸಬೇಕು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"2004ನೇ ಸಾಲಿನ ಕರ್ನಾಟಕ ಮಿತಿ ಮೀರಿದ ಬಡ್ಡಿ ವಿಧಿಸುವಿಕೆಯ ನಿಷೇಧ ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2ರಿಂದ 14ರವರೆಗೆ

ಅಧ್ಯಕ್ಷರು ಪ್ರಸ್ತಾವ ಏನೆಂದರೆ : "ಖಂಡ 2ರಿಂದ 14ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2ರಿಂದ 14ರವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು) : ಮಾನ್ಯ ಅಧ್ಯಕ್ಷರೇ, "2004ನೇ ಸಾಲಿನ ಕರ್ನಾಟಕ ಮಿತಿ ಮೀರಿದ ಬಡ್ಡಿ ವಿಧಿಸುವಿಕೆಯ ನಿಷೇಧ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ.

"2004ನೇ ಸಾಲಿನ ಕರ್ನಾಟಕ ಮಿತಿ ಮೀರಿದ ಬಡ್ಡಿ ವಿಧಿಸುವಿಕೆಯ ನಿಷೇಧ ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

10. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ : ಸೌಹಾರ್ದ ಸಹಕಾರಿ ಕಾನೂನಿಗೆ ಸಂಬಂಧಪಟ್ಟಂತೆ.

ಅಧ್ಯಕ್ಷರು : ಈಗ ನಮ್ಮ ಮುಂದೆ ಇನ್ನೂ 6 ಬಿಲ್ಸ್ ಇವೆ.

ಶ್ರೀ ಹೆಚ್. ವಿಶ್ವನಾಥ್ : ನಮ್ಮ ಸಹಕಾರಿ ಮಸೂದೆಯನ್ನು ಅಂಗೀಕರಿಸಬಹುದಾಗಿದೆ. ಅದು ಅಂತಹ ಸೀರಿಯಸ್ಸಾದ ತಿದ್ದುಪಡಿ ಏನಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತು ಹೇಳಿದರು, ಮಾನ್ಯ ಸಚಿವರು ಆಗ ಸದನದಲ್ಲಿ ಇರಲಿಲ್ಲವೆಂದು ಕಾಣುತ್ತದೆ. ಶ್ರೀಮತಿ ಸೋನಿಯಾ ಗಾಂಧಿಯವರ ಪತ್ರಕ್ಕೆ ಬಹಳ ಮಹತ್ವ ಕೊಡುತ್ತೇನೆ, ಅದರಲ್ಲಿ ಏನಿದ್ದರೂ ಅದರಂತೆ ನಡೆಯುತ್ತೇನೆ ಎಂದು ಅವರು ಹೇಳಿದ್ದಾರೆ. ನೀವು ಈ ವಿಧೇಯಕವನ್ನು ಇಲ್ಲಿ ಪರ್ಯಾಲೋಚಿಸಿರಿ. ಆಗ ಇದು ಶ್ರೀಮತಿ ಸೋನಿಯಾ ಗಾಂಧಿಯವರ ವಿಚಾರಕ್ಕೆ ವಿರುದ್ಧವಾಗಿಯೋ ಇಲ್ಲವೋ ಎಂಬುದು ನಿಮಗೇ ಗೊತ್ತಾಗುತ್ತದೆ. ಅವರ ಪತ್ರದ ಆಶಯದಂತೆಯೇ ಇದೆ ಎನ್ನುವುದಾದರೆ, ನಾವು ಈ ವಿಧೇಯಕಕ್ಕೆ `yes' ಎನ್ನುತ್ತೇವೆ.

ಶ್ರೀ ಹೆಚ್. ವಿಶ್ವನಾಥ್ : ಮಾನ್ಯ ಅಧ್ಯಕ್ಷರೇ, ಸೌಹಾರ್ದ ಸಹಕಾರಿ ಕಾನೂನಿಗೆ ಗೌರವಾನ್ವಿತ ರಾಷ್ಟ್ರಪತಿಗಳು ತಮ್ಮ ಅಂಕಿತ ಹಾಕುವ ಮುನ್ನ ಕೆಲವು ಷರತ್ತುಗಳನ್ನು ವಿಧಿಸಿದರು. ಆ ಷರತ್ತುಗಳ ಆಧಾರದ ಮೇಲೆ Reserve Bank of India ಮತ್ತು ಭಾರತ ಸರ್ಕಾರ ಕೊಟ್ಟಂತಹ ಸಲಹೆಗಳ ಮೇರೆಗೆ ಈ ಕೆಲವು ತಿದ್ದುಪಡಿಗಳನ್ನು ತಂದಿದ್ದೇವೆ. ಆ ತಿದ್ದುಪಡಿಯಲ್ಲೂ ಕೂಡ ಕೆಲವೊಂದು excess ಆಗಿವೆ ಎನ್ನತಕ್ಕಂಥ ಅಭಿಪ್ರಾಯ ಮೇಲ್ಮನೆಯಲ್ಲಿ ಈ ಮಸೂದೆ ಚರ್ಚೆಗೆ ಬಂದಾಗ ವ್ಯಕ್ತವಾಗಿದ್ದರಿಂದ, ಹಿರಿಯ ಸಹಕಾರಿ ಸದಸ್ಯರೊಡನೆ ಕುಳಿತು ಚರ್ಚಿಸಿ ಕೆಲವೊಂದನ್ನು ನಾವು ವಾಪಸ್